ಸಿ.ಸಿ 534/2022

ಪಿ.ಡಬ್ಲ್ಯೂ-1.

ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು. ದಿನಾಂಕಃ 22-10-2024.

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ಎ.ಎನ್., ವಕೀಲರಿಂದಃ**

ನಮ್ಮ ತಂದೆಗೆ ನಾನು 4 ನೇ ಮಗಳು. ನಮ್ಮ ತಂದೆಯವರು ಎಲ್ ಎಸ್ ಎಂ ಪಿ ಸೊಸೈಟಿಯಲ್ಲಿ ಮ್ಯಾನೇಜರ್ ಆಗಿ ಕಾರ್ಯ ನಿರ್ವಹಿಸುತ್ತಿದ್ದರು. ಸದರಿ ಸೊಸೈಟಿಯಲ್ಲಿ ನಮ್ಮ ತಂದೆಯವರು ಮ್ಯಾನೆಜರ್ ಆದ ಕಾಲಕ್ಕೆ ವ್ಯವಹಾರ ಅಪರ ತಪರ ಆಗಿದೆ ಎಂದು ರೈತರು ಮುಷ್ಕರ ಹೂಡಿದ್ದರು ಎಂದರೆ ಸರಿಯಲ್ಲ. ಈ ಕುರಿತು ಆಡಳಿತ ಮಂಡಳಿಯಲ್ಲಿ ಸಭೆ ನಡೆದಿದ್ದು, ಸಭೆಯಲ್ಲಿ ನಮ್ಮ ತಂದೆಯವರು ವ್ಯವಹಾರದಲ್ಲಿ ಅಪರ ತಪರ ಆದ ಬಗ್ಗೆ ಹೊಣೆಗಾರರು ಎಂದು ಠರಾವನ್ನು ಹೊರಡಿಸಿರುತ್ತಾರೆ ಎಂದರೆ ಸರಿಯಲ್ಲ. ಅದನ್ನು ಸರಿ ಮಾಡುವ ಸಲುವಾಗಿ ನಮ್ಮ ತಂದೆಯವರು ದೈವಜ್ಞ ಕೋ ಆಪರೇಟಿವ್ ಸೊಸೈಟಿಯಲ್ಲಿ 12 ಲಕ್ಷ ರೂಪಾಯಿ ಸಾಲವನ್ನು ಕೋರಿ 2019 ನೇ ಇಸ್ವಿಯಲ್ಲಿ ಅರ್ಜಿಯನ್ನು ಸಲ್ಲಿಸಿದ್ದರು ಎಂದರೆ ಸರಿಯಲ್ಲ. ಸದರಿ ಸಾಲಕ್ಕೆ ಮಿಶ್ರಿಕೋಟಿ ಎನ್ನುವ ವ್ಯಕ್ತಿ ಮತ್ತು ಈ ಪ್ರಕರಣದ ಆರೋಪಿ ಜಾಮೀನುದಾರರಾಗಿದ್ದರು ಎಂದರೆ ಸರಿಯಲ್ಲ. ಮಿಶ್ರಿಕೋಟಿರವರು ನಮ್ಮ ತಂದೆಯ ಅಕ್ಕನ ಮಗ. ನಮ್ಮ ತಂದೆಯವರು ದೈವಜ್ಞ ಕೋ ಆಪರೇಟಿವ್ ಸೊಸೈಟಿಯಲ್ಲಿ ಸಾಲ ಪಡೆದುಕೊಳ್ಳುವ ಸಮಯದಲ್ಲಿ ಭದ್ರತೆಗಾಗಿ ನೀಡಲು ಅವರ ಬಳಿ ಚೆಕ್ಕುಗಳು ಇರಲಿಲ್ಲ ಆ ಕಾಲಕ್ಕೆ ಆರೋಪಿತನಿಂದ ಅವನಿಗೆ ಸೇರಿದ ಎರಡು ಚೆಕ್ಕುಗಳನ್ನು ಪಡೆದುಕೊಂಡಿದ್ದರು ಎಂದರೆ ಸರಿಯಲ್ಲ. ನಮ್ಮ ತಂದೆಯವರಿಗೆ ಯಾವುದೇ ಆಸ್ತಿ ಇರದೇ ಇದ್ದ ಕಾರಣ ಮತ್ತು ಆರೋಪಿ ನಮ್ಮ ತಂದೆಗೆ ಆಪ್ತನಾಗಿದ್ದ ಕಾರಣ ಆರೋಪಿ ಅವನಿಗೆ ಸೇರಿದ ಎರಡು ಚೆಕ್ಕುಗಳನ್ನು ಭದ್ರತೆಗಾಗಿ ನೀಡುವ ಸಲುವಾಗಿ ನಮ್ಮ ತಂದೆಯವರಿಗೆ ನೀಡಿದ್ದನು ಎಂದರೆ ಸರಿಯಲ್ಲ. ನಂತರ ದೈವಜ್ಞ ಕೋ ಆಪರೇಟಿವ್ ಸೊಸೈಟಿಯವರು ಮಿಶ್ರಿಕೋಟಿಯವರಿಗೆ ಸೇರಿದ ಆಸ್ತಿಯನ್ನು ಸದರಿ ಸಾಲಕ್ಕೆ ಅಡಮಾನವಾಗಿ ಪಡೆದುಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ.ನಮ್ಮ ತಂದೆಯವರು ಸಲ್ಲಿಸಿದ ಸಾಲದ ಆಸ್ತಿಯನ್ನು ಸೊಸೈಟಿಯವರು ತಿರಸ್ಕರಿಸಿರುತ್ತಾರೆ ಎಂದರೆ ಸರಿಯಲ್ಲ. ದಿಃ 13-05-2019 ರಂದು ಮಿಶ್ರಿಕೋಟಿರವರು ಅಡಮಾನವಾಗಿ ಇಟ್ಟಿದ್ದ ಜಮೀನನ್ನು ಉಪನೋಂದಣಾಧಿಕಾರಿಗಳು ಹಕ್ಕು ಖುಲಾಸೆ ಪತ್ರದ ಮುಖಾಂತರ ಬಿಡುಗಡೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ದೈವಜ್ಞ ಸೊಸೈಟಿಯವರು ಸಾಲಕ್ಕೆ ಹೆಚ್ಚಿನ ಬಡ್ಡಿ ವಿದಿಸುತ್ತಾರೆ ಎಂದು ನಮ್ಮ ತಂದೆಯವರು ಸಾಲ ತೆಗೆದುಕೊಳ್ಳುವುದು ಬೇಡ ಎಂದು ನಿರ್ಧರಿಸಿದರು ಎಂದರೆ ಸರಿಯಲ್ಲ.

2. ಆರೋಪಿಯು ಸ್ಯೆಂಟ್ ಮಿಲಾಗ್ರಿಸ್ ಸೊಸ್ಯೆಟಿಯಲ್ಲಿ 1 ಕೋಟಿ 10 ಲಕ್ಷ ಸಾಲ ಪಡೆದುಕೊಂಡಿರುತ್ತಾನೆ ಎಂದರೆ ನನಗೆ ಗೊತ್ತಿಲ್ಲ. ಆರೋಪಿ ತೆಗೆದುಕೊಂಡ ಸಾಲಕ್ಕೆ ನಮ್ಮ ತಂದೆಯವರು ಜಾಮೀನುದಾರರು ಆಗಿದ್ದರು ಎಂದರೆ ಸರಿಯಲ್ಲ. ಆರೋಪಿ ಪಡೆದುಕೊಂಡ ಸಾಲ ಈವರೆಗೂ ಚಾಲ್ತಿಯಲ್ಲಿ ಇದೆ ಎಂದರೆ ನನಗೆ ಗೊತ್ತಿಲ್ಲ. ನಮ್ಮ ತಂದೆ ಮತ್ತು ಆರೋಪಿ ಆತ್ಮೀಯರಾದ ಕಾರಣ ಈ ಎಲ್ಲಾ ವ್ಯವಹಾರವನ್ನು ಮಾಡಿಕೊಂಡಿರುತ್ತಾರೆ ಎಂದರೆ ನಮ್ಮ ತಂದೆ ಮತ್ತು ಆರೋಪಿ ಆತ್ಮೀಯರಾಗಿದ್ದರು ಆದರೆ ವ್ಯವಹಾರಗಳ ಬಗ್ಗೆ ನನಗೆ ಗೊತ್ತಿಲ್ಲ. ನಮ್ಮ ತಂದೆಯವರು ಅನಾರೋಗ್ಯದಿಂದ ಬಳಲುತ್ತಿದ್ದು ಅವರು ಬೆಡ್ ರೆಸ್ಟ ತೆಗೆದುಕೊಳ್ಳುತ್ತಿದ್ದರು ಎಂದರೆ ಸರಿ. ಆರೋಪಿ ತನಗೆ ಸೇರಿದ ಚೆಕ್ಕುಗಳನ್ನು ನಮ್ಮ ತಂದೆಯವರಿಗೆ ನೀಡಿದ್ದು, ಸದರಿ ಚೆಕ್ಕುಗಳನ್ನು ನಮ್ಮ ತಂದೆಯವರು ತಾವು ಕೆಲಸ ಮಾಡುತ್ತಿದ್ದ ಸೊಸ್ಯೆಟಿಯಲ್ಲಿ ತಮ್ಮ ಡ್ರಾವರ್ ನಲ್ಲಿ ಇಟ್ಟುಕೊಂಡಿದ್ದರು ಎಂದರೆ ಸರಿಯಲ್ಲ. ಆರೋಪಿಯು ಸದರಿ ಚೆಕ್ಕುಗಳನ್ನು ತನಗೆ ವಾಪಾಸ್ಸು ಕೊಡುವಂತೆ ಪದೇ ಪದೇ ನಮ್ಮ ತಂದೆಯವರ ಬಳಿ ಕೇಳಿರುತ್ತಾನೆ, ಆದರೆ ನಮ್ಮ ತಂದೆಯವರು ಹಾಸಿಗೆ ಹಿಡಿದಿದ್ದರಿಂದ ಕಚೇರಿಗೆ ಬಂದು ಸದರಿ ಚೆಕ್ಕುಗಳನ್ನು ಆರೋಪಿಗೆ ಹಿಂದಿರುಗಿಸಲು ಸಾಧ್ಯಾವಾಗಿರುವುದಿಲ್ಲ ಎಂದರೆ ಸರಿಯಲ್ಲ.

3. ನಮ್ಮ ತಂದೆಯವರು ದಿಃ 28-05-2022 ರಂದು ತೀರಿಕೊಂಡಿರುತ್ತಾರೆ. ನಮ್ಮ ತಂದೆಯವರು ತೀರಿಕೊಂಡ ನಂತರ ಅವರು ಕೆಲಸ ಮಾಡುತ್ತಿದ್ದ ಕಚೇರಿಯಲ್ಲಿ ಅವರಿಗೆ ಸೇರಿದ ಡ್ರಾವರ್ ಬಗ್ಗೆ ಪಂಚನಾಮೆ ಮಾಡಿರುತ್ತಾರೆ ಎಂದರೆ ಸರಿ. ಪಂಚನಾಮೆಯಲ್ಲಿ ನಮೂದಿಸಿದ ಎಲ್ಲಾ ವಸ್ತುಗಳನ್ನು ನಮಗೆ ನೀಡಿರುತ್ತಾರೆ ಎಂದರೆ ಸರಿ. ಸದರಿ ವಸ್ತುಗಳಲ್ಲಿ ಆರೋಪಿಗೆ ಸೇರಿದ ಚೆಕ್ಕುಗಳು ಇದ್ದವು ಎಂದರೆ ಸರಿಯಲ್ಲ. ಸದರಿ ಚೆಕ್ಕುಗಳನ್ನು ನಾವು ಪರಿಶೀಲನೆ ಮಾಡಿದ್ದು ಆರೋಪಿಯಿಂದ ನಮ್ಮ ತಂದೆಯವರಿಗೆ ಹಣ ಬರುವುದು ಬಾಕಿ ಇದೆ ಎಂದು ಗ್ರಹಿಸಿ ಆರೋಪಿಯ ವಿರುದ್ಧ ಈ ಸುಳ್ಳು ಪ್ರಕರಣವನ್ನು ದಾಖಲು ಮಾಡಿರುತ್ತೇವೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಹಾಜರುಪಡಿಸಿದ ಚೆಕ್ಕುಗಳಿಗೆ ಮತ್ತು ನನಿಗೂ ಯಾವುದೇ ರೀತಿ ಸಂಬಂಧ ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಫಿರ್ಯಾದು ಮತ್ತು ಮುಖ್ಯ ವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ವ್ಯವಹಾರ ನಡೆದಿರುವುದಿಲ್ಲ ಎಂದರೆ ಸರಿಯಲ್ಲ. ಚೆಕ್ಕುಗಳಿಗೆ ಸಂಬಂಧಿಸಿದಂತೆ ವ್ಯವಹಾರ ಮಾಡುವ ಕೆಪಾಸಿಟಿ ನನಗೆ ಇರುವುದಿಲ್ಲ ಎಂದರೆ ಸರಿಯಲ್ಲ.

4. ಪಂಚನಾಮೆ ಮಾಡುವ ಕಾಲಕ್ಕೆ ನಾನು ಹಾಜರಿದ್ದೆ, ಆದರೆ ಪಂಚನಾಮೆ ಬರೆದಿರುವುದನ್ನು ನಾನು ನೋಡಿರುವುದಿಲ್ಲ. ಸದರಿ ಪಂಚನಾಮೆಯಲ್ಲಿ ನಮ್ಮ ತಂದೆಯವರಿಗೆ ಸೇರಿದ ಡ್ರಾವರ್ ನಲ್ಲಿ ಆರೋಪಿಗೆ ಸೇರಿದ ಚೆಕ್ಕುಗಳು ಇದ್ದವು ಎಂದು ನಮೂದು ಮಾಡಿರುತ್ತಾರೆ, ಸದರಿ ವಿಷಯ ನನಗೆ ತಿಳಿದಿದ್ದರೂ ಸಹ ನಾನು ಸುಳ್ಳು

ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಯಾವ ದಿನಾಂಕದಂದು ನಮ್ಮಿಂದ ಹಣ ಕೇಳಿರುತ್ತಾನೆ ಎಂದರೆ ಜೂನ್ 2022 ರಲ್ಲಿ ಕೇಳಿರುತ್ತಾನೆ, ದಿನಾಂಕ ನನಗೆ ನೆನಪಿಲ್ಲ. ಈ ಮೊದಲು ನಾನು ಆರೋಪಿಯೊಂದಿಗೆ ಹಣದ ವ್ಯವಹಾರ ಮಾಡಿರುವುದಿಲ್ಲ. ಆರೋಪಿ ನನ್ನ ಬಳಿ ಎರಡು ಬಾರಿ ಹಣವನ್ನು ಕೇಳಿರುತ್ತಾನೆ, ನನಗೆ ತಾರೀಖು ನೆನಪಿಲ್ಲ. ಆರೋಪಿ ಜೂನ್ 2022 ರಲ್ಲಿ ನನ್ನ ಬಳಿ ಹಣವನ್ನು ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿ ಮತ್ತು ನಮ್ಮ ತಂದೆಯವರು ಆತ್ಮೀಯರಾಗಿದ್ದು, ಆರೋಪಿ ನಮ್ಮ ಮನೆಗೆ ಬರುತ್ತಿದ್ದರು ಮತ್ತು ನಮ್ಮ ಕ್ಷೇಮ ವಿಚಾರಿಸುತ್ತಿದ್ದರು ಎಂದರೆ ಮನೆಗೆ ಬರುತ್ತಿದ್ದರು ಎಂದು ನುಡಿಯುತ್ತಾರೆ. ಆರೋಪಿ ನಮ್ಮ ಮನೆಗೆ ಬಂದು ಹಣವನ್ನು ಕೇಳಿರುವುದಿಲ್ಲ ಎಂದರೆ ಸರಿಯಲ್ಲ.

5. ಆರೋಪಿ ಮೊದಲನೇ ಬಾರಿ ಮನೆಗೆ ಬಂದು ದುಡ್ಡನ್ನು ಕೇಳಿರುತ್ತಾನೆ, ಸದರಿ ಕಾಲಕ್ಕೆ ಮನೆಯಲ್ಲಿ ನಾನು ಮತ್ತು ನನ್ನ ತಾಯಿ ಹಾಜರಿದ್ದೆವು. ಆರೋಪಿ ನಮ್ಮ ಮನೆಗೆ ಬಂದಾಗ ಮಧ್ಯಾಹ್ನ ಆಗಿರಬಹುದು. ಆರೋಪಿ ಎರಡನೇ ಬಾರಿ ದುಡ್ಡನ್ನು ಕೇಳಿದಾಗ ನಾವು ಕೊಡುತ್ತೇವೆ ಎಂದು ಹೇಳಿದೆವು. ಆರೋಪಿಯ ಮೊದಲನೇ ಮತ್ತು ಎರಡನೇಯ ಕೋರಿಕೆ ನಡುವೆ 2 ದಿನಗಳ ಅಂತರವಿರುತ್ತದೆ. ಆರೋಪಿ ಎರಡನೇ ಬಾರಿ ಬಂದು ದುಡ್ಡನ್ನು ಕೇಳಿದ್ದು, ಅದರ ಮಾರನೇ ದಿನ ನಾವು ಅವನಿಗೆ ದುಡ್ಡನ್ನು ಕೊಟ್ಟಿರುತ್ತೇವೆ. ಆರೋಪಿಗೆ ಹಣ ಕೊಟ್ಟ ದಿನಾಂಕ ನನಗೆ ನೆನಪಿಲ್ಲ, ಆದರೆ ಜೂನ್ ತಿಂಗಳಲ್ಲಿ ಕೊಟ್ಟಿರುತ್ತೇವೆ. ಆರೋಪಿಗೆ ಮಧ್ಯಾಹ್ನ 3-00 ರಿಂದ 4-00 ಗಂಟೆಯ ಹೊತ್ತಿಗೆ ದುಡ್ಡನ್ನು ಕೊಟ್ಟಿರುತ್ತೇವೆ. ಈ ಹಿಂದೆ ನನ್ನ ಪಾಟೀ ಸವಾಲಿನಲ್ಲಿ ನಾನು ಎಫ್.ಡಿ.ಯನ್ನು ಮುರಿಸಿ ಆರೋಪಿಗೆ ದುಡ್ಡನ್ನು ಕೊಟ್ಟಿರುತ್ತೇನೆ ಎಂದು ನುಡಿದಿದ್ದು ಸದರಿ ಎಫ್ ಡಿಯನ್ನು ಯಾವ ಬ್ಯಾಂಕಿನಲ್ಲಿ ಇಟ್ಟಿದ್ದಿರಿ ಎಂದರೆ ಆಜಾದ್ ಬ್ಯಾಂಕಿನಲ್ಲಿ ಇಟ್ಟಿದ್ದೆನು ಎಂದು ನುಡಿಯುತ್ತಾರೆ. ಆಜಾದ್ ಬ್ಯಾಂಕಿನಲ್ಲಿ ಯಾವ ತಾರೀಖಿನಂದು ಎಷ್ಟು ಮೊತ್ತದ ಎಫ್ ಡಿ ಮಾಡಿಸಿದ್ದಿರಿ ಎಂದರೆ ನನಗೆ ನೆನಪಿಲ್ಲ. ಸದರಿ ಎಫ್ ಡಿ ಎಷ್ಟು ಸಮಯಕ್ಕೆ ಇಟ್ಟಿದ್ದಿರಿ ಎಂದರೆ 1 ವರ್ಷದ ಕಾಲಕ್ಕೆ ಎಫ್ ಡಿ ಇಟ್ಟಿದ್ದೆವು ಎಂದು ನುಡಿಯುತ್ತಾರೆ. ಎಫ್ ಡಿಯನ್ನು ಯಾವ ತಾರೀಖಿಗೆ ಮುರಿಸಿದೆನು ಎಂದು ನನಗೆ ನೆನಪಿಲ್ಲ.

**ಮುಂದುವರೆದ ಪಾಟೀ ಸವಾಲಿಗೆ ಆರೋಪಿ ಪರ ವಕೀಲರು ಕಾಲಾವಕಾಶ ಕೇಳಿದ್ದು, ಕಲ್ಪಿಸಲಾಯಿತು.**

ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ. ಸರಿ ಇದೆ.

-Sd-

ಸಿವಿಲ್ ಜಡ್ಜ ಮತ್ತು ಜೆ.ಎಂ.ಎಫ್.ಸಿ.,
ಮುಂಡಗೋಡ .